ಅಂದಾಗ, 'ಹಾಗಾದ್ರೆ ಮಾಸ್ಟ್ರ, ರಾಮಯ್ಯಆಳ್ವರು ಆಗಲೇ, ನಿಮ್ಮನ್ನು ತಮ್ಮ ಮಗಳಿಗೆ ಕಟ್ಟಲು ನಿರ್ಧರಿಸಿದ್ದಿರ್ಬೇಕಲ್ವ...' ಎಂದು ಹೇಳಿ ದೇಶಾವರಿ ನಗೆ ನಕ್ಕು 'ವಾತಾವರಣವನ್ನು' ಸ್ವಲ್ಪ ಹಗುರಗೊಳಿಸಿದ್ದರು.

'ಆ ಬೆಜಕರೆಹಕ್ಕಿನ ಸೊಪ್ಪಿ(ಸ್ವಪ್ನ) ತನ್ನ ಬಾಲ್ಯದ ವ್ಯಕ್ತಿತ್ವವನ್ನೆಲ್ಲ ಈ 'ದೂರ್ವಾಸಮುನಿ'ಯೆದುರು ಹೇಗೆ ಬಿಚ್ಚಿಟ್ಟಿದ್ದಾಳೋ ಏನೋ?... ಆಕೆ ನಿನ್ನೆ ಆಸ್ಪತ್ರೆಯಿಂದ ಕೌಶಿಕನನ್ನು ಬೀಳ್ಕೊಡುವ ಕಾಲಕ್ಕೆ 'ಏ ಮಾರಾಯ... ಆ ಯಾದವಗಿರಿ ಡಾಕ್ಟ್ರ ಹತ್ರ ನಿನ್ನ ಮಗನ ಸಮಸ್ಯೆಯ ಜೊತೆ ನಿನ್ನ ಸಮಸ್ಯೆಯನ್ನೂ ಹೇಳೋ ಪುಣ್ಯಾತ್ಮ... ನೀನು ಬರೀ ಹಾದಿಬೀದಿಯ ಹುಚ್ಚನಾಗಿದ್ರೆ ಪರವಾಗಿರ್ಲಿಲ್ಲ... ಏನಾದ್ರು ಮಾಡ್ಬಹುದಿತ್ತು; ಆದ್ರೆ ನೀನು ಭಾರೀ ಬುದ್ಧಿವಂತನೆಂದು ತಿಳಿದುಕೊಂಡಿರುವ ಹುಚ್ಚನಲ್ವೇನೋ... ಅದ್ರಿಂದ' ಎಂದು ಕಿಲಕಿಲ ನಗುತ್ತಲೇ ನನ್ನ ವ್ಯಕ್ತಿತ್ವವನ್ನು ನನ್ನ ಮುಂದೆಯೇ ನಿರ್ದಾಕ್ಷಿಣ್ಯವಾಗಿ ಹರಡಿಟ್ಟವಳು, ಈ ವಾಹೀದ್ ವೈದ್ಯರಲ್ಲಿ ನನ್ನನ್ನು ಹೇಗೆ ಬಣ್ಣಿಸಿದ್ದಾಳೋ ಏನೋ...' ಎಂಬ ಆತಂಕದಿಂದ ಆತ ಅಸುಖಿಯಾಗತೊಡಗಿದ್ದ.

ಡಾ. ವಾಹೀದ್ ಅವರು, ಅಕ್ಷಯಕುಮಾರನ ಮಡದಿ ಕುಮುದಳನ್ನು ಪರಿಚಯಿಸಿಕೊಳ್ಳುತ್ತಿದ್ದಂತೆ ಹುಲ್ಲು ಹಾಸಿನ ಮೇಲೆ ಕೂತು ಸ್ತೋತ್ರ ಪಠಿಸುತ್ತಿದ್ದ ಮಕ್ಕಳೆಲ್ಲ ಒಟ್ಟಾಗಿ 'ಅಪ್ಪಾಜಿ... ವಕ್ರತುಂಡ ಮಹಾಕಾಯ ಕೋಟಿ ಸೂರ್ಯ... ಮುಗೀತು... ಇನ್ನೇನು ಹೇಳೋದು' ಎಂದು ಘೋಳಿಡುತ್ತಿದ್ದರು. ಅಷ್ಟರಲ್ಲಿ ವಾಹೀದ್ ಅವರು ಎದ್ದು ಬಂದು 'ಬಣ್ಣದ ತಗಡಿನ ತುತ್ತೂರಿ ಊದಿ ಮಕ್ಳೇ' ಎಂದು ಕ್ಷಣ ಮಾತ್ರದಲ್ಲಿ ಉತ್ತರಿಸಿ, ತಾನು ಕಾಣಬೇಕಾಗಿದ್ದ ಇನ್ನೂ ಅಲ್ಲೆಲ್ಲೊ ಸುತ್ತುತ್ತಿದ್ದ ಕೌಶಿಕನಿಗಾಗಿ ಒಮ್ಮೆ ಅರ್ಧಚಂದ್ರಾಕೃತಿಯಲ್ಲಿ ತಿರುಗಿ ಕಣ್ಣಾಡಿಸಿದ್ದರು.

ಪುಟಾಣಿ ಕೌಶಿಕ, ಬೆನ್ನಿಗೆ ಎರಡೂ ಕೈಗಳನ್ನು ಕಟ್ಟಿಕೊಂಡು ಆಸ್ಪತ್ರೆಯ ಕಾರಿಡಾರ್‌ನೊಳಗೆ ಹೊಕ್ಕು, ಅಲ್ಲಿ ಗೋಡೆಗೆ ನೇತುಹಾಕಿದ್ದ ಚಿತ್ರಗಳನ್ನು ನೋಡುವುದರಲ್ಲಿ ತಲ್ಲೀನನಾಗಿದ್ದ. 'ಓಯ್ ಮಿನಿ ಸ್ಯಾಬ್ರೆ... ಬನ್ನಿ ಬೇಗ ಇಲ್ಲಿಗೆ, ನಾವೀಗ ಓ... ಅಲ್ಲಿರುವ ಆ ಮರದಡಿಯಲ್ಲಿ ಕೂತು ಬಿಡುವ. ಆ ಮರದ ಮೇಲೆ ಗಿಳಿ, ಕೋಗಿಲೆ, ಮರಕುಟಿಗೆ, ಬಣ್ಣದ ಗುಬ್ಬಿ ಪಿಕಳಾರ, ಎಲ್ಲವೂ ಇವೆ... ಅಲ್ಲಿ ನೋಡ್ರಿ ನೀವು!! ಎಷ್ಟು ಬಣ್ಣದ ಚಿಟ್ಟೆಗಳಿವೆ... ಆ ಮಲ್ಲಿಗೆ, ಸೇವಂತಿ ಹೂಗಳ ಮೇಲೆ!!...' ಎಂದು ಡಾ. ವಾಹೀದ್ ಅವರು ಕಂಪೌಂಡ್‌ನ ಎಡಮೂಲೆಯಲ್ಲಿದ್ದ ಮಲ್ಲಿಗೆ ಬಳ್ಳಿ, ಮಾವು, ಬೇವು, ಮರಗಳತ್ತ ಕೈ ತೋರಿಸಿ ಮುಖವರಳಿಸಿ ನಗುತ್ತಾ... ಕೌಶಿಕನನ್ನು ಕರೆದಾಗ ಆತ, ವೈದ್ಯರು ತನಗೆ ಪುರಾತನ ಕಾಲದ ಪರಿಚಯವೆಂಬಂತೆ ಬಾಯ್ತುಂಬ ನಗುತ್ತ, ನಗು ಮಿಂಚುತ್ತಿದ್ದ ತನ್ನ ಕಣ್ಣುಗಳಲ್ಲಿ ಕುತೂಹಲ ಉತ್ಸಾಹದ ಹನಿಗಳನ್ನೂ ಚಿಮ್ಮಿಸುತ್ತ ಕಾರಿಡಾರ್‌ನಿಂದ ನೇರ ಆ ಹುಲ್ಲು ಹಾಸಿಗೆ ತೆರೆದಿದ್ದ ಮೆಟ್ಟಿಲುಗಳನ್ನಿಳಿದು ಲಾನ್‌ನತ್ತ ಕಾಲುಹಾಕಿದ್ದ.

ಆತನ ಎಳೆಗರುವಿನಂತಹ ಜಿಗಿತದ ಪರಿಯನ್ನು ಕಂಡು ತಾಯಿ ಕುಮುದಾಳ ಎದೆ ಖುಷಿಯಿಂದ ಬಿರಿಯುತ್ತಿದ್ದರೆ... ಅಪ್ಪ ಅಕ್ಷಯಕುಮಾರನಿಗೆ ಮಾತ್ರ ಆತನ ಓಟದ ದಿಕ್ಕು ಕಂಡು ಒಳಗೊಳಗೇ ಭಯ ಅಮರಿಕೊಳ್ಳತೊಡಗಿತ್ತು.

ಏನನಿಸಿತೋ ಅಕ್ಷಯಕುಮಾರನಿಗೆ, ಒಂದು ಕ್ಷಣ ತಟ್ಟನೆ ಆತ ಕೂತಲ್ಲಿಂದ ಹೊರಬಂದು 'ಕೌಶೀ ಬಾರೋ ಇಲ್ಲಿ...' ಎಂದು ಮೂರು ಶಬ್ದ ಉರುಳಿಸಿದ್ದಾನಷ್ಟೆ; ಅಷ್ಟರಲ್ಲಿ ಡಾ. ವಾಹೀದ್ ಅಡ್ಡ ಬಾಯಿ ಹಾಕಿ ಗಂಭೀರ ಸ್ವರದಲ್ಲಿ ಅಂದರು,